# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 753(986) |
| ಸದಸ್ಯರ ಹೆಸರು | : ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 24-07-2024. |
| ಉತ್ತರಿಸುವ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಸೌಲಭ್ಯವನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: | ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಸೌಲಭ್ಯವನ್ನು ಒದಗಿಸಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>1. ಇಲಾಖೆಯಡಿ 136 ವಸತಿ ಶಾಲೆ/ಕಾಲೇಜುಗಳು ಮತ್ತು 200 ಮೌಲಾನ ಆಜಾದ್ ಮಾದರಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಶಾಲೆಗಳಲ್ಲಿ ಸುಮಾರು 75000 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.<br>2. ಅಲ್ಪಸಂಖ್ಯಾತ ಸಮುದಾಯದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಒಟ್ಟು 304 ವಿದ್ಯಾರ್ಥಿಗಳು ಕಾರ್ಯನಿರ್ವಹಿಸುತ್ತಿವೆ.<br>3. ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.<br>4. ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪದವಿಯೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ.<br>5. ವಸತಿ ಶಾಲೆ/ಕಾಲೇಜುಗಳು ಮತ್ತು ಮೌಲಾನಾ ಆಜಾದ್ ಮಾದರಿ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದಿಂದಲೇ NEET/KCET/JEE /CLAT/CA Foundation ತರಬೇತಿ ನೀಡಲಾಗುತ್ತಿದೆ.<br>6. ಉಚಿತ ಸಮವಸ್ತ್ರ ಮತ್ತು ಶುಚಿ ಕಿಟ್‌ಗಳನ್ನು ಒದಗಿಸಲಾಗುತ್ತಿದೆ.<br>7. IAS/KAS ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಜ್ ಭವನದಲ್ಲಿ ತರಬೇತಿ ನೀಡಲಾಗುತ್ತಿದೆ.<br>8. ಪ್ರಸಕ್ತ ಸಾಲಿನಲ್ಲಿ 50 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 100 ಹೊಸ ಮೌಲಾನಾ ಆಜಾದ್ ಮಾದರಿ ಶಾಲೆಗಳು ಮತ್ತು 100 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಹೊಸದಾಗಿ ಪ್ರಾರಂಭಿಸಲಾಗುವುದು ಹಾಗೂ 25 ಮೌಲಾನಾ ಆಜಾದ್ ಮಾದರಿ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲಾಗುವುದು.<br>9. ಉನ್ನತ ಶಿಕ್ಷಣಕ್ಕಾಗಿ ವಿದ್ಯಾಭ್ಯಾಸ ಸಾಲ ನೀಡಲಾಗುವುದು.<br>10. ಇಲಾಖೆಯಡಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳಿಗೆ ಸ್ವಂತ ಕಟ್ಟಡ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಅನುದಾನ ಲಭ್ಯತೆಗನುಗುಣವಾಗಿ ಆದ್ಯತೆಯ ಮೇಲೆ ಒದಗಿಸಲಾಗುವುದು. |

..........2

| | | |
|---|---|---|
| ಆ) | ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರೆಷ್ಟು;(ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ಒದಗಿಸುವುದು ಅವರುಗಳಿಗೆ ವೇತನ ನಿಗದಿಪಡಿಸುವ ಮಾನದಂಡಗಳೇನು: | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 3916 ಹೊರಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.<br>ಸದರಿ ಹೊರಗುತ್ತಿಗೆ ನೌಕರರಿಗೆ ಕಾರ್ಮಿಕ ಇಲಾಖೆಯಿಂದ ಕಾಲಕಾಲಕ್ಕೆ ನಿಗದಿಪಡಿಸಿದ ಕನಿಷ್ಠ ವೇತನವನ್ನು ನಿಗದಿಪಡಿಸಲಾಗುರುತ್ತದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ಹೊರಗುತ್ತಿಗೆ ನೌಕರರ ವೇತನ ಪರಿಷ್ಕರಣೆ ಮಾಡಲಾಗಿದೆಯೇ: ಮಾಡಿದ್ದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು; ಹೊರಗುತ್ತಿಗೆ ನೌಕರರಿಗೆ ವೇತನ ಹೊರತುಪಡಿಸಿ ಇತರೆ ಯಾವುದಾದರೂ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆಯೇ: | ಕಾರ್ಮಿಕ ಇಲಾಖೆಯಿಂದ ಕನಿಷ್ಠ ವೇತನವನ್ನು ಪರಿಷ್ಕರಿಸಿ ಕಾಲಕಾಲಕ್ಕೆ ಹೊರಡಿಸಿರುವ/ಆದೇಶ/ ಸುತ್ತೋಲೆ / ಮಾರ್ಗಸೂಚಿಗಳನ್ವಯ ಹೊರಗುತ್ತಿಗೆ ನೌಕರರಿಗೆ ವೇತನ ಪಾವತಿಸಲಾಗುತ್ತಿದೆ. ಅಲ್ಲದೇ P.F, ESI ಸೇರಿದಂತೆ ಕಾರ್ಮಿಕ ಕಾಯ್ದೆಯ ಪ್ರಕಾರ ಲಭ್ಯವಾಗುವ ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. |
| ಈ) | ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸ್ಥಗಿತಗೊಳಿಸಲಾಗಿರುವ ಯೋಜನೆಗಳು ಯಾವುವು; ಯಾವ ಕಾರಣಕ್ಕಾಗಿ ಯೋಜನೆಗಳನ್ನು ಸ್ಥಗಿತಗೊಳಿಸಲಾಗಿದೆ: (ಸಂಪೂರ್ಣ ಮಾಹಿತಿ ಒದಗಿಸುವುದು) | ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಅನುದಾನದ ಕೊರತೆಯಿಂದಾಗಿ ಕಳೆದ ಮೂರು ವರ್ಷಗಳಲ್ಲಿ ಕೆಳಕಂಡ ಯೋಜನೆಗಳನ್ನು ಸ್ಥಗಿತಗೊಳಿಸಲಾಗಿದೆ.<br>1. ಗೃಹ ನಿರ್ಮಾಣ-ಮಾರ್ಜಿನ್ ಹಣ ಸಾಲ ಯೋಜನೆ.<br>2. ಸ್ವಯಂ ಉದ್ಯೋಗ ಯೋಜನೆಯನ್ನು ವೃತ್ತಿ ಪ್ರೋತ್ಸಾಹ ಯೋಜನೆಯಲ್ಲಿ ವಿಲೀನಗೊಳಿಸಿ ಗರಿಷ್ಠ ಸಾಲ ರೂ.1.00 ಲಕ್ಷ, 50% ಸಹಾಯಧನ.<br>3. ಅಲ್ಪಸಂಖ್ಯಾತರ ರೈತರ ಕಲ್ಯಾಣ ಯೋಜನೆ.<br>4. ಪಶುಸಂಗೋಪನೆಗೆ ಉತ್ತೇಜನ.<br>5. ಆಟೋ ಸರ್ವೀಸ್, ಆಟೋ ಮೊಬೈಲ್, ಬಿದರಿ ಮತ್ತು ರೇಷ್ಮೆ ಚನ್ನಪಟ್ಟಣ ಕರಕುಶಲ ತರಬೇತಿ ಪ್ರೋತ್ಸಾಹ ಮತ್ತು ಮೂಲಭೂತ ಸೌಕರ್ಯ .<br>6. ಮನೆ ಮಳಿಗೆ.<br>7. ವೈಯಕ್ತಿಕ ಮೈಕ್ರೋ ಸಾಲ ಯೋಜನೆ.<br>8. ಮೈಕ್ರೋ ವೈಯಕ್ತಿಕ (ಕೋವಿಡ್-19) ಸಾಲ ಯೋಜನೆ. |
| ಉ) | ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯೇ: ಹೌದಾದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು. | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಸಮುದಾಯ ಆಧಾರಿತ ತರಬೇತಿ ಯೋಜನೆಯನ್ನು ಜಾರಿಗೊಳಿಸಲಾಗಿದ್ದು Beauty Parlor course, Retail Sales, Office soft skill, Security Services, Short Hand and Heavy vehicle driving ಕೋರ್ಸ್‌ಗಳಿಗೆ ಒಟ್ಟು 2000 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಕ್ರಮಕೈಗೊಳ್ಳಲಾಗಿದೆ. |

ಸಂಖ್ಯೆ:MWD 146 LMQ 2024

B. Zameer (signature)

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.

ಪ್ರ.ಸಂ. 453(486)

**ಅನುಬಂಧ**

ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಜಿಲ್ಲಾವಾರು ವಿವರ.

| ಕ್ರ.ಸಂ. | ಜಿಲ್ಲೆ | ಹೊರಗುತ್ತಿಗೆ ನೌಕರರ ಸಂಖ್ಯೆ | | | | | | |
|---|---|---|---|---|---|---|---|---|
| | | DoM | KMDC | WAKF | KSMC | KUA | HAJ | KSWC & WF |
| 1 | ಬೆಳಗಾವಿ | 164 | 4 | 6 | - | - | - | - |
| 2 | ಬಾಗಲಕೋಟೆ | 179 | 3 | 1 | - | - | - | - |
| 3 | ವಿಜಯಪುರ | 222 | 3 | 1 | - | - | - | - |
| 4 | ಕಲಬುರಗಿ | 380 | 4 | 2 | - | - | - | - |
| 5 | ಯಾದಗಿರಿ | 82 | 3 | 1 | - | - | - | - |
| 6 | ಬೀದರ್ | 133 | 4 | 1 | - | - | - | - |
| 7 | ರಾಯಚೂರು | 178 | 4 | 2 | - | - | - | - |
| 8 | ಕೊಪ್ಪಳ | 229 | 4 | 1 | - | - | - | - |
| 9 | ಗದಗ | 86 | 3 | 1 | - | - | - | - |
| 10 | ಧಾರವಾಡ | 108 | 3 | 1 | - | - | - | - |
| 11 | ಉತ್ತರ ಕನ್ನಡ | 57 | 3 | 3 | - | - | - | - |
| 12 | ಹಾವೇರಿ | 177 | 3 | 3 | - | - | - | - |
| 13 | ವಿಜಯನಗರ | 95 | 0 | 1 | - | - | - | - |
| 14 | ಬಳ್ಳಾರಿ | 70 | 5 | 3 | - | - | - | - |
| 15 | ಚಿತ್ರದುರ್ಗ | 101 | 3 | 2 | - | - | - | - |
| 16 | ದಾವಣಗೆರೆ | 116 | 4 | 3 | - | - | - | - |
| 17 | ಶಿವಮೊಗ್ಗ | 132 | 4 | 4 | - | - | - | - |
| 18 | ಉಡುಪಿ | 15 | 3 | 2 | - | - | - | - |
| 19 | ಚಿಕ್ಕಮಗಳೂರು | 66 | 3 | 4 | - | - | - | - |
| 20 | ತುಮಕೂರು | 214 | 4 | 4 | - | - | - | - |
| 21 | ಚಿಕ್ಕಬಳ್ಳಾಪುರ | 84 | 3 | 3 | - | - | - | - |
| 22 | ಕೋಲಾರ | 75 | 3 | 2 | - | - | - | - |
| 23 | ಬೆಂಗಳೂರು (ನ) | 74 | 41 | 68 | 6 | 5 | 8 | 7 |
| 24 | ಬೆಂಗಳೂರು (ಗ್ರಾ) | 50 | 3 | 3 | - | - | - | - |
| 25 | ರಾಮನಗರ | 94 | 3 | 4 | - | - | - | - |
| 26 | ಮಂಡ್ಯ | 67 | 3 | 2 | - | - | - | - |
| 27 | ಹಾಸನ | 126 | 3 | 5 | - | - | - | - |
| 28 | ದಕ್ಷಿಣ ಕನ್ನಡ | 58 | 4 | 2 | - | - | - | - |
| 29 | ಕೊಡಗು | 44 | 3 | 3 | - | - | - | - |
| 30 | ಮೈಸೂರು | 95 | 4 | 3 | - | - | - | - |
| 31 | ಚಾಮರಾಜನಗರ | 37 | 3 | 1 | - | - | - | - |
| | ಒಟ್ಟು | 3608 | 140 | 142 | 6 | 5 | 8 | 7 |

23/7/2024

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ